# ಮರುಭೂಮಿಯಲ್ಲಿ ಸಂತಸದ ಚಿಲುಮೆ



ಪಾಮ್ ಸ್ಪ್ರಿಂಗ್ಸ್ ಮರುಭೂಮಿಯಾದರೂ ಬರಡು ನೆಲವಲ್ಲ. ಪ್ರವಾಸಿಗರು ಲಕ್ಷಾಂತರ ಸಂಖ್ಯೆಯಲ್ಲಿ ಭೇಟಿ ನೀಡುವಂತೆ ಅಲ್ಲಿ ಅದ್ಭುತ ಆಕರ್ಷಣೆಗಳನ್ನು ಅಳವಡಿಸಲಾಗಿದೆ. ನಿಸರ್ಗದ ಸೆಳೆತದ ಜೊತೆಗೆ ಈ ಮಾನವ ನಿರ್ಮಿತ ಆಕರ್ಷಣೆಗಳೂ ಪ್ರವಾಸಿಗರನ್ನು ಮುದಗೊಳಿಸುತ್ತವೆ.

■ ಚಿತ್ರ– ಲೇಖನ: **ವಿಠಲದಾಸ ಭಟ್**

1

ಆಫ್ರಿಕಾದ ಮರುಭೂಮಿಯ ಬಗ್ಗೆ ಎಲ್ಲರಿಗೂ ಗೊತ್ತು. ಅಮೆರಿಕದಲ್ಲೂ ಮರುಭೂಮಿ ಇದೆಯೆ... ಎನ್ನುವುದು ಕುತೂಹಲದ ಪ್ರಶ್ನೆ. ಕ್ಯಾಲಿಫೋರ್ನಿಯಾದ ಮರುಭೂಮಿ ನಗರ ಪಾಮ್ ಸ್ಪ್ರಿಂಗ್ಸ್ ಅನ್ನು ಅಮೆರಿಕನ್ನರು ನಂದನವನದಂತೆ ಸೃಷ್ಟಿಸಿದ್ದಾರೆ.

ಎಲ್ಲೆಡೆ ಕಾಣಸಿಗುವ ಕ್ಯಾಲಿಫೋರ್ನಿಯಾ ಫ್ಯಾನ್ ಪಾಮ್ ಮರಗಳಿಂದ ಊರಿಗೆ ಆ ಹೆಸರು ಬಂದಿದೆ. 300 ದಿನ ಸೂರ್ಯನ ಬೆಳಕು ಲಭ್ಯವಿದ್ದು, ಬೇಸಿಗೆಯಲ್ಲಿ ಹಗಲು ಉಷ್ಣತೆ 43 ಡಿ.ಸೆಂ ಮೀರುವುದುಂಟು. ಇಲ್ಲಿ ಪ್ರವಾಸೋದ್ಯಮವೇ ಆರ್ಥಿಕತೆಯ ಬೆನ್ನೆಲುಬಾಗಿದೆ. 60–70ರ ದಶಕದಲ್ಲಿ ಹಾಲಿವುಡ್ ದಂತಕಥೆಗಳಾದ ಫ್ರ್ಯಾಂಕ್ ಸಿನಾಟ್ರ, ಬಾಬ್ ಹೋಪ್ ಹಾಗೂ ಬಿಂಗ್ ಕ್ರಾಸ್ಬೀ ಮುಂತಾದ ಸಿನಿಮಾ ನಟರ ನೆಚ್ಚಿನ ವಾಸ ತಾಣವಾಗಿದ್ದರಿಂದ ಮುಖ್ಯ ರಸ್ತೆಗಳಿಗೆ ಅವರ ಹೆಸರನ್ನೇ ಇಡಲಾಗಿದೆ. ಆ ಕಾಲದ ಪ್ರಖ್ಯಾತ ನಟಿಯರೊಂದಿಗೆ ಫ್ರ್ಯಾಂಕ್ ಸಿನಾಟ್ರಾರ ಹಲವು ವಿವಾಹ ಮತ್ತು ವಿಚ್ಛೇದನ–ಗಳಿಗೆ ಇಲ್ಲಿರುವ ಅವರ ಐಷಾರಾಮಿ ಮನೆ ಸಾಕ್ಷಿಯಾಗಿದೆ. ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೀನ್ ಆ ಮನೆಯಲ್ಲಿ ರಹಸ್ಯವಾಗಿ ವಾಸಿಸಿದ್ದರು ಎಂದು ಆ ಕಾಲದ ಹೋಟೆಲ್‌ಗಳಲ್ಲಿ ಪ್ರದರ್ಶಿಸಲ್ಪಟ್ಟ ಫೋಟೋಗಳಿಂದ ತಿಳಿದು ಬರುತ್ತದೆ.

ನೂರಕ್ಕೂ ಮಿಕ್ಕ ಗಾಲ್ಫ್ ಕೋರ್ಸ್‌ಗಳಿಂದ ಇದು ಅಮೆರಿಕಾದ ಗಾಲ್ಫ್ ರಾಜಧಾನಿ ಎಂದೇ ಪ್ರಖ್ಯಾತವಾಗಿದೆ. ಪ್ರತೀ ವರ್ಷ ಜನವರಿಯಲ್ಲಿ ಅಂತರ–ರಾಷ್ಟ್ರೀಯ ಚಲನಚಿತ್ರೋತ್ಸವ ನಡೆಯುತ್ತದೆ. ಅಮೆರಿಕಾದ ಅಧ್ಯಕ್ಷ ಸ್ಥಾನ–ದಿಂದ ಇತ್ತೀಚೆಗೆ ಕೆಳಗಿಳಿದ ಬರಾಕ್ ಒಬಾಮಾ ಅವರೂ ವಿಶ್ರಾಂತಿಗಾಗಿ ಪಾಮ್‌ಸ್ಪ್ರಿಂಗ್‌ಅನ್ನೇ ಆಯ್ದುಕೊಂಡದ್ದು ಈ ಸ್ಥಳಕ್ಕೆ ಇರುವ ಜನಪ್ರಿಯತೆಗೆ ಸಾಕ್ಷಿ. ಡಿಸೆಂಬರ್ ತಿಂಗಳು ಪ್ರವಾಸಕ್ಕೆ ಅತ್ಯಂತ ಅನುಕೂಲಕರ ಹವಾಮಾನ.

ಕಾರ್ಬಜೀನ್ ಡೈನಾಸಾರ್ ಪಾರ್ಕ್

ಜಗತ್ತಿನಲ್ಲಿಯೇ ಅತಿ ಎತ್ತರ, ಉದ್ದ, ಬೃಹತ್ ಆಕಾರದ ಡೈನಾಸಾರ್